185

3853

<u>ಶ್ರೀ ಮರಿತಿಬ್ಬೇಗೌಡ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ನಿಯಮ 72ರಡಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ.</u>

*ಮೇಲಿನ ಸೂಚನಾ ಪತ್ರದಲ್ಲಿ ಮಾನ್ಯ ಸದಸ್ಯರು ರಾಜ್ಯದ ವಿವಿಧ ಇಲಾಖೆಗಳಲ್ಲಿ ಐಟಿಐ, ಅಪ್ರೆಂಟೀಸ್ ಮತ್ತು ಡಿಪ್ಲೋಮಾ ಉತ್ತೀರ್ಣರಾದವರು ಸರ್ಕಾರಿ ಕೆಲಸಕ್ಕೆ ಅರ್ಜಿ ಸಲ್ಲಿಸುವಾಗ ಸದರಿ ವಿದ್ಯಾರ್ಹತೆಗೆ ತಕ್ಕುದಾದ ಸೂಕ್ತ ಹುದ್ದೆ ಮತ್ತು ಸ್ಥಾನಮಾನವನ್ನು ನೀಡುವ ಸಂಬಂಧ ಆಡಳಿತ ಮತ್ತು ಸುಧಾರಣಾ ಇಲಾಖೆಯು ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ರೂಪಿಸದೆ ಇರುವುದರಿಂದ ಐಟಿಐ ಮತ್ತು ಡಿಪ್ಲೋಮಾ ಉತ್ತೀರ್ಣರಾದ ವಿದ್ಯಾರ್ಥಿಗಳು ಸೂಕ್ತ ಉದ್ಯೋಗವಿಲ್ಲದೆ ನಿರುದ್ಯೋಗ ಸಮಸ್ಯೆ ಹಾಗೂ ಯಾವ ಹುದ್ದೆಗೆ ಅರ್ಜಿ ಸಲ್ಲಿಸಬೇಕೆಂಬ ಗೊಂದಲದಿಂದ ಬಳಲುತ್ತಿರುವ ಗಂಭೀರ ಸಮಸ್ಯೆ ಕುರಿತು ಸರ್ಕಾರದ ಗಮನ ಸೆಳೆದಿರುತ್ತಾರೆ.*

ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978 ರಡಿ ರಾಜ್ಯ ಸರ್ಕಾರದ ಅಡಿಯಲ್ಲಿ ಬರುವ ಇಲಾಖೆಗಳು ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಬೇಕಾಗುತ್ತದೆ. ಈ ರೀತಿ ನಿಯಮಗಳನ್ನು ರಚಿಸುವಾಗ ಅನುಸರಿಸಬೇಕಾದ ಸಾಮಾನ್ಯ ತತ್ವಗಳು ಹಾಗೂ ಮಾರ್ಗಸೂಚನೆಗಳನ್ನು ಸಿಆಸು ಇಲಾಖೆಯಿಂದ ನೀಡಲಾಗುತ್ತಿದೆ.

ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನೇರ ನೇಮಕಾತಿ, ಮುಂಬಡ್ತಿ, ಆಯ್ಕೆ ಮೂಲಕ ಮುಂಬಡ್ತಿ, ನಿಯೋಜನೆ, ವೃಂದೀಕರಣ, ವರ್ಗಾವಣೆ ಮೂಲಕ ನೇಮಕಾತಿ, ಇತರೆ ಕೆಲವು ವಿಷಯಗಳನ್ನು ನಮೂದಿಸುವಾಗ ಪರಿಗಣಿಸಬೇಕಾದ ಅಂಶಗಳ ಬಗ್ಗೆ ಸಿಆಸು ಇಲಾಖೆಯಿಂದ ಮಾರ್ಗಸೂಚನೆಗಳನ್ನು ನೀಡಲಾಗುತ್ತದೆ.

ಆದರೆ, ಯಾವುದೇ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಿಆಸು ಇಲಾಖೆಯು ರಚಿಸುವುದಿಲ್ಲ. ಸಂಬಂಧಪಟ್ಟ ಇಲಾಖೆಗಳು ಆಡಳಿತ ಹಿತದೃಷ್ಟಿಯಿಂದ ಇಲಾಖೆಯ ಕಾರ್ಯಸ್ವರೂಪಕ್ಕೆ ಅನುಗುಣವಾಗಿ ಅಗತ್ಯವಿರುವ ಹುದ್ದೆಗಳನ್ನು ಹಾಗೂ ಅಂತಹ ಹುದ್ದೆಗಳಿಗೆ ಅಗತ್ಯವಿರುವ ವಿದ್ಯಾರ್ಹತೆಯನ್ನು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಮೂದಿಸಲು ನಿರ್ಧರಿಸಬೇಕಾಗುತ್ತದೆ.

ವಿವಿಧ ಇಲಾಖೆಗಳಲ್ಲಿ ಐ.ಟಿ.ಐ ಮತ್ತು ಡಿಪ್ಲೊಮೊ ವಿದ್ಯಾರ್ಹತೆ ಅವಶ್ಯವಿರುವ ನೇರ ನೇಮಕಾತಿ ಹುದ್ದೆಗಳನ್ನು ನೇಮಕಾತಿ ನಿಯಮಗಳಲ್ಲಿ ಅಳವಡಿಸಿಕೊಂಡು, ಇಲಾಖಾ ಹಂತದಲ್ಲಿಯೇ ಇಂತಹ ನಿಯಮಗಳನ್ನು ರಚಿಸಿ ಪ್ರಕಟಿಸಲಾಗುತ್ತಿದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ವ್ಯಾಪ್ತಿಗೆ ಒಳಪಡುವ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಮಾತ್ರ ಈ ಇಲಾಖೆಯಿಂದ ರಚಿಸಿ ಪ್ರಕಟಿಸಲಾಗುತ್ತದೆ.

ಯಾವುದೇ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು 1978ರ ಅಧಿನಿಯಮದಲ್ಲಿ ನಿಗದಿಪಡಿಸಿರುವ ಕಾರ್ಯವಿಧಾನವನ್ನು ಅನುಸರಿಸಿ ರಚಿಸಲು ಮತ್ತು ತಿದ್ದುಪಡಿ ಮಾಡಲು ಕ್ರಮ ವಹಿಸಬೇಕಾಗುತ್ತದೆ.

ಸಂಖ್ಯೆ: ಸಿಆಸುಇ 52 ಸೇನಿಡಿ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ



Generated from eOffice by G JAGADEESHA, CMO-JS(GJ), JOINT SECRETARY, CMO on 21/03/2022 06:03 PM